# ನೀವು ಕೇಳಿದಿರಿ?

ಬಾ.ರಂ. ಸುರೇಶ್, ಶಿವಮೊಗ್ಗ

ಹುಡುಗಿಯರು ಟೈಟ್ ಪ್ಯಾಂಟ್, ಟಿ–ಶರ್ಟ್ ಧರಿಸಿ ಹೋಗುವುದನ್ನು ಕಂಡರೆ ಮೈ ಜುಂ ಎನ್ನುವುದೇಕೆ?



ವಸ್ತ್ರ ಬಿಗಿಯಿದ್ದರೆ ವ್ಯಕ್ತಿತ್ವ ಸಡಿಲವಾಗಿರುತ್ತದೆಂಬ ಮೃಗೀಯ ಹುಚ್ಚುಕಲ್ಪನೆಯೇ ಕಾರಣ.

ಬಿ. ಬೋರೇಗೌಡ, ತಿರುಮಲನಗರ

ಧರ್ಮಸ್ಥಳದ ಧರ್ಮಾಧಿಕಾರಿಗಳನ್ನು ನಂಬಲೇ ಗುರುದೇವಾ?

ನಿಜನಾಮ ಅರಿಯದ ನನ್ನನ್ನೇ ನಂಬಲು ಸಿದ್ಧರಿರುವಾಗ...

ವಿ. ಹೇಮಂತಕುಮಾರ್, ಬೆಂಗಳೂರು

ವಾಸ್ತು ಪ್ರಕಾರ ಬೆಡ್‌ರೂಂ ಯಾವ ದಿಕ್ಕಿನಲ್ಲಿ ಇರಬೇಕು ಸರ್?

ಅಡುಗೆಯ ಘಾಟು ನುಗ್ಗದಂತಹ ದಿಕ್ಕಿನಲ್ಲಿ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ಕಾಗೆ 'ಕಾ ಕಾ' ಅನ್ನುವುದರ ಬದಲು 'ಕೊರೊನಾ ಕೊರೊನಾ' ಅಂತ ಅರಚುತ್ತಿದೆಯಲ್ಲಾ...?



ಅದು ಪಿಂಡಗಳ ಅತಿವೃಷ್ಟಿ ತಂದ ಹರ್ಷದ ಕೂಗಂತೆ.

ಪಿ. ಶಂಕರಪ್ಪ, ಶಿವಮೊಗ್ಗ

ಪ್ರಾಮಾಣಿಕವಾಗಿ ಹೇಳಿ, ಕೊರೊನಾ ಪ್ಯಾಕೇಜ್ ಯಾರನ್ನು ಉದ್ಧಾರ ಮಾಡಿತು?

ಪ್ರಾಮಾಣಿಕತೆಯನ್ನು ಗಾಳಿಗೆ ತೂರಿದ ವೈದ್ಯಕೀಯ ಗುಂಪನ್ನು.

ಹೆಚ್.ಆರ್. ಕೌಶಿಕರಾಜ್, ಹನುಮನಾಳು

'ಸುಧಾ' 14ನೆಯ ಪುಟದಲ್ಲೇ ಇರುತ್ತೀರಲ್ಲ, ಮುಂದೆ ಹೋಗುವ ಆಸೆ ಇಲ್ಲವೆ?

ದಶ ದಿಕ್ಕಿನಲ್ಲಿ ದೃಷ್ಟಿ ಹರಿಸಿ 4 ಜನ ಒಪ್ಪುವಂತಹ ಉತ್ತರ ಕೊಡಲು 14ನೇ ಪುಟವೇ ಸರಿ.

ಗಂಜಾಂ ನಾಗರಾಜ, ಮೈಸೂರು

ಇಂದಿನ ಮಹಿಳಾಮಣಿಗಳಿಗೆಲ್ಲ ಈಶ್ವರನಂತೆ ಹಣೆಗಣ್ಣು ಇದ್ದಿದ್ದರೆ ಏನಾಗುತ್ತಿತ್ತು?

ಐಲೈನರ್, ಮಸ್ಕರಾ, ಐಬ್ರೊ ಶೇಪಿಂಗುಗಳ ಖರ್ಚು ಶೇ. 50 ಹೆಚ್ಚುತ್ತಿತ್ತು.

ಧನ್ಯತ ಎಂ.ಸಿ. ಬೆಂಗಳೂರು

ಯಮಲೋಕಕ್ಕೂ, ಪ್ರೇಮಲೋಕಕ್ಕೂ ಏನು ವ್ಯತ್ಯಾಸ?

ಪ್ರೇಮಲೋಕದ ಪಾಶ ಬಲು ಹಿತಕರ.

ಅನಸೂಯ ಟಿ. ಕೇದಿಗೆಮನೆ

ಪ್ರಶ್ನೆಗಳ ರಾಶಿ ನೋಡಿ ತಲೆ ಚಿಟ್ಟು ಹಿಡಿದಿಲ್ಲವೆ ಉತ್ತರಭೂಪರೆ?

ಊಹೂಂ. ಈ ವಿಷಯದಲ್ಲಿ ನಾನು ಬೃಹತ್ ಸ್ಯಾರಿ ಸೆಂಟರ್‌ನಲ್ಲಿ ಕುಳಿತ ಮಹಿಳೆ.

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು

ಪ್ರೀತಿ ಇಲ್ಲದ ಪ್ರಪಂಚ ಇರುವುದೆ?

ತಾಲಿಬಾನ್ ಕಂಡಿರಲ್ಲ! ಅಂಧ ಧರ್ಮಶ್ರದ್ಧೆ ಮಾನವಪ್ರೀತಿಗೆ ಮಾರಕ.

ಪಿ.ಎನ್. ಶ್ರೀವತ್ಸ, ಬೆಂಗಳೂರು

ಎಲ್ಲ ವೃದ್ಧಾಶ್ರಮಗಳಲ್ಲೂ ವೃದ್ಧರಿಗೆ ಬರೀ ಸಸ್ಯಾಹಾರವನ್ನೇ ಕೊಡುವುದರ ಕಾರಣ...?

ಶಾಖಾಹಾರದ್ದೇ ಶಾಕ್ ತಡೆಯದ ಅವರು ಮಾಂಸಾಹಾರಕ್ಕೆ ಹಾರವಾದರೆಂಬ ಭಯ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

ಲಾಕ್‌ಡೌನ್‌ನ ನಿಜವಾದ ಅರ್ಥವೇನು?

ಸ್ವಂತ ಬುದ್ಧಿ ಇಲ್ಲದ ಪ್ರಾಣಿಗಳ ಕಾಲಿಗೆ ಸರ್ಕಾರ ತೊಡಿಸುವ ಚೈನು.

ಎ.ಕೆ. ಪಟ್ಟಾಭಿ, ಬೆಂಗಳೂರು

ಗಂಡ ಆಡಳಿತ ಪಕ್ಷ. ಹೆಂಡತಿಯದು ವಿರೋಧ ಪಕ್ಷ. ಇವರಿಬ್ಬರ ಸಂಸಾರ ಹೇಗೆ ಸಾಗುತ್ತದೆ?

ಸಮ್ಮಿಶ್ರ ಸರ್ಕಾರದಂತೆ.

ಆರ್. ನಾಗರಾಜ್, ಗೊರೂರು

ಬಯಕೆ ತೀರದ ಹೆಣ್ಣು ಸತ್ತರೆ ಮೋಹಿನಿ ಆಗ್ತಾಳೆ. ಆಸೆ ಮುಗಿಯದ ಗಂಡು ಸತ್ತರೆ?

ಅವನ ಹೆಂಡತಿಗೆ ಕಡೆಗೂ ನೆಮ್ಮದಿ ಸಿಗತ್ತೆ.

## ವಾರದ ಪ್ರಶ್ನೆ

ಎಸ್.ವಿ. ಶ್ರೀನಿವಾಸ್, ಮೈಸೂರು

ಉತ್ತರ ಕನ್ನಡ, ದಕ್ಷಿಣ ಕನ್ನಡ ಇರುವಂತೆ ಪೂರ್ವ ಕನ್ನಡ, ಪಶ್ಚಿಮ ಕನ್ನಡ ಯಾಕಿಲ್ಲ?

ಇವೆಯಲ್ಲ... ಪೂರ್ವಕನ್ನಡ ಹಳೆಗನ್ನಡ; ಪಶ್ಚಿಮ ಕನ್ನಡ ಅಮೆರಿಕನ್ನರ ಆಕ್ಸೆಂಟೆಡ್ ಕಂಗ್ಲಿಷ್.

ಶಿರಾಲಿ ದೀಪಕ್ ಶೇಟ್, ಬೆಂಗಳೂರು

ರುದ್ರಭೂಮಿಗೂ, ರಂಗಭೂಮಿಗೂ ವ್ಯತ್ಯಾಸವೇನು?

ರಂಗಭೂಮಿಯಲ್ಲಿ ಪ್ರವೇಶದ ನಂತರ ನಿರ್ಗಮನ; ರುದ್ರಭೂಮಿಗೆ ನಿರ್ಗಮನದ ನಂತರವೇ ಪ್ರವೇಶ.

ಆರ್. ಅಪೇಕ್ಷ, ಟಿ.ನರಸೀಪುರ

ಬಲಗೈ ಬಂಟ ಎಂದು ಕರೆಯುತ್ತಾರೆ. ಆದರೆ ಎಡಗೈ ಬಂಟ ಎಂದು ಏಕೆ ಕರೆಯುವುದಿಲ್ಲ?

ಬಲ ಎಂದರೆ **Right**. ಎಲ್ಲ ಸರಿಯಾದ ಕೆಲಸಗಳಿಗೆ ಜೊತೆ ಇರುವವನು ಬಲಗೈ ಬಂಟ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

ಮದ್ಯಪ್ರಿಯರಿಗೆ ಈ ಮಾಧ್ಯಮಗಳೇಕೆ ಲೈವ್ ಕವರೇಜ್ ನೀಡುತ್ತವೆ?



ಅಡ್ಡಾದಿಡ್ಡಿ ಮಾತಾಡುವವರಿಗೆ ಅಡ್ಡಾದಿಡ್ಡಿ ನಡೆಯುವವರ ಮೇಲೆ ವಿಶೇಷ ಮಮತೆಯಂತೆ.

ಸುರೇಶ್ ಬಿ.ವಿ. ಬೆಂಗಳೂರು

ಏಕೆ ಹೆಂಗಸರ ಚೈನ್ ಮಾತ್ರ ಕಿತ್ತುಕೊಂಡು ಹೋಗುತ್ತಾರೆ. ಗಂಡಸರೂ ಸರ ಹಾಕಿಕೊಳ್ಳುತ್ತಾರಲ್ಲವಾ?

ಶರ್ಟಿನ ಮೇಲೆ ಕೈಗೆ ಛಕ್ಕನೆ ಸಿಕ್ಕುವಂತೆ ಧರಿಸಿರುವುದಿಲ್ಲವಲ್ಲ.

■ ರಾಮ್

ಪ್ರಶ್ನೆ ಕಳುಹಿಸಲು: editorsu@sudha.co.in